**ಕರ್ನಾಟಕ ವಿಧಾನ ಪರಿಷತ್ತು**

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2717
ಸದಸ್ಯರ ಹೆಸರು : ಶ್ರೀ ಸಲೀಂ ಅಹಮದ್
ಉತ್ತರಿಸುವ ದಿನಾಂಕ : 25-03-2022
ಉತ್ತರಿಸುವ ಸಚಿವರು : ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವತಿಯಿಂದ ನಡೆಯುತ್ತಿರುವ ವಸತಿ ಶಾಲೆಗಳ ಸಂಖ್ಯೆ ಎಷ್ಟು; | ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವ್ಯಾಪ್ತಿಯಲ್ಲಿ 826 ವಸತಿ ಶಾಲೆ/ಕಾಲೇಜುಗಳು (ಪ.ಜಾ-503, ಪ.ವರ್ಗ-156, ಹಿಂ.ವರ್ಗ-167) ಕಾರ್ಯನಿರ್ವಹಿಸುತ್ತಿವೆ. |
| ಆ) | ಈ ಪೈಕಿ ಸ್ವಂತ ಕಟ್ಟಡದಲ್ಲಿರುವ ಮತ್ತು ಬಾಡಿಗೆ ಕಟ್ಟಡದಲ್ಲಿರುವ ವಸತಿ ಶಾಲೆಗಳ ಸಂಖ್ಯೆ ಎಷ್ಟು; | 826 ವಸತಿ ಶಾಲೆ / ಕಾಲೇಜುಗಳ ಪೈಕಿ 546 ವಸತಿ ಶಾಲೆ/ ಕಾಲೇಜುಗಳು ಸ್ವಂತ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿವೆ. (ಪ.ಜಾತಿ -313, ಪ.ವರ್ಗ-101 ಹಾಗೂ ಹಿಂ.ವರ್ಗ-132)<br><br>ಬಾಡಿಗೆ ಕಟ್ಟಡಗಳಲ್ಲಿ 219 ವಸತಿ ಶಾಲೆ/ ಕಾಲೇಜುಗಳು ಕಾರ್ಯನಿರ್ವಹಿಸುತ್ತಿವೆ.(ಪ.ಜಾ-146, ಪ.ವರ್ಗ-46 ಹಾಗೂ ಹಿಂ.ವರ್ಗ-27)<br><br>ಬಾಡಿಗೆ ರಹಿತ ಕಟ್ಟಡಗಳಲ್ಲಿ 61 ವಸತಿ ಶಾಲೆ/ ಕಾಲೇಜುಗಳು ಕಾರ್ಯನಿರ್ವಹಿಸುತ್ತಿವೆ. (ಪ.ಜಾ-44, ಪ.ವರ್ಗ-09 ಹಾಗೂ ಹಿಂ.ವರ್ಗ-08) |
| ಇ) | ಬಾಡಿಗೆ ಕಟ್ಟಡದಲ್ಲಿರುವ ವಸತಿ ಶಾಲೆಗಳನ್ನು ಸ್ಥಳಾಂತರ ಗೊಳಿಸುವ ಸಲುವಾಗಿ ಜಮೀನನ್ನು ಪಡೆಯಲಾಗಿದೆಯೇ; ಜಮೀನು ಪಡೆದಿರುವ ವಸತಿ ಶಾಲೆಗಳ ಕಟ್ಟಡ ನಿರ್ಮಾಣವನ್ನು ಯಾವ ಕಾಲಮಿತಿಯಲ್ಲಿ ಮಾಡಲಾಗುವುದು; | ಬಾಡಿಗೆ/ ಬಾಡಿಗೆ ರಹಿತ ವಸತಿ ಶಾಲೆ/ ಕಾಲೇಜುಗಳ ಪೈಕಿ (ಪ.ಜಾ-58, ಪ.ವರ್ಗ-17 ಹಾಗೂ ಹಿಂ.ವರ್ಗ-28) 103 ವಸತಿ ಶಾಲೆ/ ಕಾಲೇಜುಗಳಿಗೆ ಜಮೀನು ಪಡೆಯಲಾಗಿದ್ದು, ಅನುದಾನದ ಲಭ್ಯತೆಗೆ, ಅನುಗುಣವಾಗಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಕ್ರಮ ವಹಿಸಲಾಗುವುದು. |

| | | |
|---|---|---|
| ಈ) | ಬಾಡಿಗೆ ಕಟ್ಟಡದಲ್ಲಿರುವ ವಸತಿ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಮೂಲಸೌಕರ್ಯಗಳನ್ನು ಯಾವ ರೀತಿಯಲ್ಲಿ ಕಲ್ಪಿಸಲಾಗಿದೆ? | ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ವಸತಿ ಶಾಲೆ/ ಕಾಲೇಜುಗಳಿಗೆ ಅಗತ್ಯ ಮೂಲಭೂತ ಸೌಕರ್ಯಗಳಾದ ಪಠ್ಯಪುಸ್ತಕ, ನೋಟ್ ಪುಸ್ತಕ ಮತ್ತು ಲೇಖನ ಸಾಮಗ್ರಿಗಳು, ಶುಚಿ, ಸಂಭ್ರಮ ಕಿಟ್, ಸಮವಸ್ತ್ರ, ಶೂ, ಸಾಕ್ಸ್, ಟೈ ಮತ್ತು ಬೆಲ್ಟ್ ಗಳನ್ನು ಪ್ರತಿ ಶೈಕ್ಷಣಿಕ ವರ್ಷದ ಪ್ರಾರಂಭದಲ್ಲಿಯೇ ಉಚಿತವಾಗಿ ಪೂರೈಕೆ ಮಾಡಲಾಗುತ್ತಿದೆ.<br><br>ವಸತಿ ಶಾಲೆ/ ಕಾಲೇಜುಗಳಿಗೆ ಅಗತ್ಯ ಮೂಲಭೂತ ಸೌಕರ್ಯಗಳಾದ ಡೆಸ್ಕ್ ಕಂ ಬೆಂಚ್, ಎಸ್ ಮಾದರಿ ಛೇರ್, ಕಂಪ್ಯೂಟರ್ ಟೇಬಲ್ & ಛೇರ್, ಹಾಸಿಗೆ ದಿಂಬು, ಡೈನಿಂಗ್ ಟೇಬಲ್, ಪಾತ್ರೆ ಪರಿಕರಗಳು, ತಟ್ಟೆ ಲೋಟ, ಕ್ರೀಡಾ ಸಾಮಗ್ರಿಗಳು, ಪಾಠೋಪಕರಣಗಳು, ಪ್ರಯೋಗಾಲಯ ಸಾಮಗ್ರಿಗಳು, ಸಂಗೀತ ಉಪಕರಣ, ಟ್ರಂಕ್, ಸೋಲಾರ್ ವಾಟರ್ ಹೀಟರ್, ಸೋಲಾರ್ ಸ್ಟ್ರೀಟ್ ಲೈಟಿಂಗ್ಸ್, ಸ್ಮಾರ್ಟ್ ಕ್ಲಾಸ್, ನರ್ಸಿಂಗ್ ಕಿಟ್, ಶಾಲಾ ಬ್ಯಾಗ್ ಇತ್ಯಾದಿ ಅಗತ್ಯ ಸಾಮಗ್ರಿಗಳನ್ನು ಸ್ಥಳಾವಕಾಶ ಹಾಗೂ ಅನುದಾನ ಲಭ್ಯತೆ ಅನುಸಾರ ಹಂತ ಹಂತವಾಗಿ ಒದಗಿಸಲಾಗುತ್ತಿದೆ. |

ಸಕಇ 199 ಮೊದೇಶಾ 2022

**(ಕೋಟ ಶ್ರೀನಿವಾಸ ಪೂಜಾರಿ)**
ಸಮಾಜ ಕಲ್ಯಾಣ ಮತ್ತು
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.